# ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟ

ಬಸವೇಶ್ವರ ಬ್ಯಾಂಕ್ ಸರ್ಕಲ್, ಸೆಕ್ಟರ ನಂ.25 ನವನಗರ, ಬಾಗಲಕೋಟೆ –587 103

ನಂ.ಆಡಳಿತ/ಸಿಬ್ಬಂದಿ/ನೇಮಕಾತಿ/ 351/2022–2023 ದಿನಾಂಕ : 13/01/2023

## ಸಿಬ್ಬಂದಿ ನೇಮಕಾತಿ ಪ್ರಕಟಣೆ

**ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿ., ಬಾಗಲಕೋಟ** ಇದರಲ್ಲಿ ಖಾಲಿ ಇರುವ ಈ ಕೆಳಕಂಡ **35** ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬ್ಯಾಂಕಿನಿಂದ ಪಡೆದ ಅರ್ಜಿಯನ್ನು ಅಭ್ಯರ್ಥಿಗಳು ಬ್ಯಾಂಕು ನಿಗದಿಪಡಿಸಿದ ಅರ್ಜಿ ನಮೂನೆಗಳಲ್ಲಿಯೇ ಅರ್ಜಿಗಳನ್ನು ಸಲ್ಲಿಸಬೇಕು.

**ನೇಮಕಾತಿಗೆ ಪ್ರಕಟಿಸಲಾಗಿರುವ ಹುದ್ದೆಗಳ ವಿವರ ಈ ಕೆಳಗಿನಂತೆ ಇರುತ್ತದೆ.**

| ಅ.ನಂ. | ಹುದ್ದೆಯ ವಿವರ | ನೇಮಕಾತಿ ಮಾಡಿಕೊಳ್ಳಬೇಕಾದ ಸಂಖ್ಯೆ | ವೇತನ |
|---|---|---|---|
| 1 | ಕಿರಿಯ ಸಹಾಯಕರು | 25 | 33450.00 – 62600.00 |
| 2 | ಸಿಪಾಯಿ | 10 | 27650.00 – 52650.00 |

### ವಿದ್ಯಾರ್ಹತೆ :

**ಕಿರಿಯ ಸಹಾಯಕರು:** ಅಧಿಕೃತವಾಗಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಕಂಪ್ಯೂಟರ ಕಾರ್ಯನಿರ್ವಹಣೆ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು. ಈ ಕುರಿತು ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**ಸಿಪಾಯಿ:** SSLC ಪರಿಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಕನ್ನಡ ಓದಲು ಹಾಗೂ ಬರೆಯಲು ಬರಬೇಕು.

**ವಯೋಮಿತಿ:** ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರಕಾರದ ರೀತ್ಯಾ ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು.

- **ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ – 40 ವರ್ಷಗಳು**
- **ಬ) ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ – 38 ವರ್ಷಗಳು**
- **ಕ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ – 35 ವರ್ಷಗಳು**

### ಅರ್ಜಿ ಶುಲ್ಕ :

ಕಿರಿಯ ಸಹಾಯಕರ ಹುದ್ದೆಗೆ ಅರ್ಜಿ ಶುಲ್ಕ ರೂ.1,000/–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ/ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ:500/–. ಸಿಪಾಯಿ ಹುದ್ದೆಗೆ ಅರ್ಜಿ ಶುಲ್ಕ ರೂ.500/– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ/ ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ:250/– ಅರ್ಜಿ ಶುಲ್ಕವನ್ನು**SHRI BASAVESHWAR SAHAKARI BANK NYT., BAGALKOT, A/C SS -568** ಹೆಸರಿನಲ್ಲಿ ಬಾಗಲಕೋಟದಲ್ಲಿ ಸಂದಾಯ ವಾಗುವಂತೆ ಡಿಮಾಂಡ್ ಡ್ರಾಪ್ಟ ಪಡೆದು ಅರ್ಜಿಯ ಜೊತೆಲಗತ್ತಿಸಬೇಕು. ಅಥವಾ ಬ್ಯಾಂಕಿನ ಕಛೇರಿ ಅವಧಿಯಲ್ಲಿ (ರವಿವಾರ ಮತ್ತು ರಜೆ ದಿನ ಹೊರತುಪಡಿಸಿ) ನಗದು ಪಾವತಿಸಿ, ನಕಲು ಪ್ರತಿಯನ್ನು **(Xerox Copy)** ಅರ್ಜಿಗೆ ಲಗತ್ತಿಸಬೇಕು. ಈ ಹಣವನ್ನು ಯಾವದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವದಿಲ್ಲ.

### ಅರ್ಜಿ ಸಲ್ಲಿಸುವ ವಿಧಾನ :

1. ಬ್ಯಾಂಕು ನಿಗದಿಪಡಿಸಿದ ಅರ್ಜಿಗಳಲ್ಲಿ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು, ನಿಗದಿತ ಅರ್ಜಿಗಳನ್ನು ರೂ.100/– + **GST** ಶುಲ್ಕವನ್ನು ಭರಣಾ ಮಾಡಿ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಬೆಳಗ್ಗೆ 10.30 ರಿಂದ ಮಧ್ಯಾಹ್ನ 2.30 ಘಂಟೆಯವರಿಗೆ (ರವಿವಾರ ಹಾಗೂ ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದು.
2. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಕಿರಿಯ ಸಹಾಯಕ ಮತ್ತು ಸಿಪಾಯಿ ಹುದ್ದೆಗೆ ಬೇರೆ ಬೇರೆಯಾಗಿ ಅರ್ಜಿ ಸಲ್ಲಿಸಬೇಕು.
3. ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತದೆ ಎಂಬುದನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ನಮೂದಿಸಬೇಕು.
4. ಭರ್ತಿ ಮಾಡಿದ ಅರ್ಜಿಗಳನ್ನು **ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ, ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿ., ಬಾಗಲಕೋಟ** ಬಸವೇಶ್ವರ ಬ್ಯಾಂಕ್ ಸರ್ಕಲ್, ಸೆಕ್ಟರ ನಂ.25, ನವನಗರ, ಬಾಗಲಕೋಟೆ – 587 103 ಈ ಹೆಸರಿಗೆ ಸಲ್ಲಿಸಬೇಕು.
5. ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ 31/01/2023 ಮಂಗಳವಾರ ಮಧ್ಯಾಹ್ನ 3.00 ಘಂಟೆ** ಒಳಗಾಗಿ ಬ್ಯಾಂಕಿನ **ಪ್ರಧಾನ ಕಛೇರಿ, ನವನಗರ, ಬಾಗಲಕೋಟದಲ್ಲಿ** ಅಂಚೆ ಮೂಲಕ ಅಥವಾ ಸಮಕ್ಷಮ ಸಲ್ಲಿಸಬೇಕು. ತದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವದು ಹಾಗೂ ಅರ್ಜಿಯು ಯಾವದೇ ಕಾರಣಗಳಿಂದ ನಿಗದಿಪಡಿಸಿದ ದಿನಾಂಕ/ಅವಧಿಯಲ್ಲಿ ತಲುಪದೆ ಇದ್ದಲ್ಲಿ/ಬರದೇ ಇದ್ದಲ್ಲಿ ಬ್ಯಾಂಕ ಹೊಣೆಗಾರರಾಗುವದಿಲ್ಲ.
6. ಅರ್ಜಿಯಲ್ಲಿರುವ ಎಲ್ಲಾ ಅಂಕಣಗಳನ್ನು ಪೂರ್ತಿ ಭರ್ತಿ ಮಾಡಿರಬೇಕು. ಅಪೂರ್ಣಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
7. ಅಭ್ಯರ್ಥಿಗಳು ಕನ್ನಡ, ಇಂಗ್ಲೀಷ್ ಭಾಷಾ ಜ್ಞಾನವನ್ನು ಹೊಂದಿರುವದು ಅವಶ್ಯಕ.
8. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನಕ್ಕೆ ಹಾಜರಾಗಬೇಕು. ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನದ ದಿನಾಂಕ–ವಿವರಗಳನ್ನು ಪ್ರತ್ಯೇಕವಾಗಿ SMS/ಅಂಚೆ/ ಕೋರಿಯರ ಮೂಲಕ ತಿಳಿಸಲಾಗುವುದು.

### ಕೆಳಗಿನ ದಾಖಲಾತಿಗಳನ್ನು ಅಭ್ಯರ್ಥಿಯು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು.

1. ಅಭ್ಯರ್ಥಿಯ ಪಾಸ್‌ಪೋರ್ಟ ಅಳತೆಯ ಇತ್ತೀಚಿನ ಭಾವಚಿತ್ರ ಅಂಟಿಸಿ ಸಹಿಮಾಡಬೇಕು.
2. ವಯಸ್ಸಿನ ದೃಢಿಕರಣ ಬಗ್ಗೆ SSLC ಅಂಕ ಪಟ್ಟಿ/ವರ್ಗಾವಣೆ ಪ್ರಮಾಣಪತ್ರದ/Leaving Certificate ನಕಲು ಲಗತ್ತಿಸಬೇಕು.
3. ಕಿರಿಯ ಸಹಾಯಕ ಹುದ್ದೆಗಾಗಿ ವಿದ್ಯಾರ್ಹತೆ ಕುರಿತು ಎಸ್.ಎಸ್.ಎಲ್.ಸಿ./ಪಿಯುಸಿ/ಪದವಿಯ ಎಲ್ಲಾ ವರ್ಷಗಳ ಸೆಮಿಸ್ಟರ್‌ಗಳ ಅಂಕಪಟ್ಟಿ ಗಳ ನಕಲುಗಳನ್ನು ಲಗತ್ತಿಸಬೇಕು.
4. ಸಿಪಾಯಿ ಹುದ್ದೆಗಾಗಿ ವಿದ್ಯಾರ್ಹತೆ ಕುರಿತು ಎಸ್.ಎಸ್.ಎಲ್.ಸಿ.ಅಂಕಪಟ್ಟಿ ನಕಲನ್ನು ಲಗತ್ತಿಸಬೇಕು.
5. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕರ್ನಾಟಕ ಸರಕಾರ ನಿಗದಿಪಡಿಸಿದ ನಮೂನೆ ಯಲ್ಲಿ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು, ಈ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರಬೇಕು.

### ಇತರೆ ಸೂಚನೆಗಳು

1. ನೇಮಕಾತಿ ಪ್ರಕ್ರಿಯೆಯು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನಗಳನ್ನು ಒಳಗೊಂಡಿರುತ್ತದೆ. ಹುದ್ದೆಗೆ ನಿಗದಿಪಡಿಸಿದ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವದು. ಅಂತಹ ಅಭ್ಯರ್ಥಿಗಳು ಸಂದರ್ಶನ ಕಾಲಕ್ಕೆ ಬರುವಾಗ ಎಲ್ಲ ಅವಶ್ಯಕ ಮೂಲ ಪ್ರಮಾಣ ಪತ್ರ **(Origional Certificates)** ಹಾಗು ದಾಖಲೆ ಪತ್ರಗಳನ್ನು ತಪ್ಪದೆ ಹಾಜರ ಪಡಿಸಬೇಕು.
2. ಪೂರ್ಣ ವಿವರಗಳನ್ನು ಹೊಂದಿರದ, ಸ್ಪಷ್ಟವಾಗಿ ಬರೆಯದ, ಅಪೂರ್ಣವಿದ್ದ ಸಹಿ ಮಾಡದೇ ಇರುವ ಹಾಗೂ ಅವಶ್ಯಕ ದಾಖಲಾತಿ ಗಳನ್ನು ಲಗತ್ತಿಸದೇ ಇರುವ ಮತ್ತು ನಿಗದಿಪಡಿಸಿದ ದಿನಾಂಕ/ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಅಭ್ಯರ್ಥಿಗಳ ಆಯ್ಕೆ, ಅರ್ಜಿ ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.
4. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ನೇಮಕಾತಿ ಸಮೀತಿ ಕಾಯ್ದಿರಿಸಿಕೊಂಡಿದೆ.
5. ಯಾವದೇ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ಬಂದಿಲ್ಲವಾದರೆ, ಸಂದರ್ಶನಕ್ಕೆ ಅರ್ಹತೆ ಹೊಂದಿಲ್ಲವೆಂದು ತಿಳಯಬೇಕು ಈ ಕುರಿತು ಯಾವದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವದಿಲ್ಲ.
6. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಪರೀಕ್ಷಾರ್ಹ ಸೇವೆಯಲ್ಲಿ (ಪ್ರೋಬೇಶನರಿ) ಇರಬೇಕಾಗುವದು. ಪರೀಕ್ಷಾರ್ಹ ಅವಧಿಯ ಕೊನೆಯಲ್ಲಿ ಕಾರ್ಯಕ್ಷಮತೆಯು ತೃಪ್ತಿಕರ ಆಗಿರದಿದ್ದಲ್ಲಿ ನೇಮಕಗೊಂಡ ನೌಕರನನ್ನು ಯಾವುದೇ ಸಂದರ್ಭದಲ್ಲಿ ಸೇವೆಯಿಂದ ತೆಗೆದುಹಾಕಲಾಗುವದು.
7. ಪರೀಕ್ಷಾರ್ಹ (ಪ್ರೋಬೇಶನರಿ) ಅವಧಿಯಲ್ಲಿ ಕಾರ್ಯಕ್ಷಮತೆ ತೃಪ್ತಿಕರವಾಗಿ ನಿರ್ವಹಿಸಿದ ನೌಕರರಿಗೆ, ಬ್ಯಾಂಕಿನ ನಿಯಮಗಳನ್ವಯ, ಮಂಡಳಿಯು ಕಾಲಕಾಲಕ್ಕೆ ನಿರ್ಧರಿಸುವ ವೇತನ ಶ್ರೇಣಿ ನಿಗದಿಪಡಿಸಲಾಗುವದು.
8. ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲಾದ ನಗದು ಭದ್ರತಾ ಠೇವಣಿ ಹಾಗೂ ಇಬ್ಬರು ಗಣ್ಯವ್ಯಕ್ತಿಗಳಿಂದ ನಷ್ಟಭರ್ತಿ ಬಾಂಡ ನೀಡಬೇಕು.

**ಸಹಿ/– ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇಮಕಾತಿ ಸಮಿತಿ**
**ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ,**
**ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿ., ಬಾಗಲಕೋಟ**

**ಸ್ಥಳ: ಬಾಗಲಕೋಟ**
**ದಿನಾಂಕ: 13.01.2023**